## ಹೋಮ್ ಕ್ವಾರಂಟೈನ್

ಜೂನ್ 18ರ ಸಂಚಿಕೆಯಲ್ಲಿ ಪ್ರಕಟವಾದ ಶಂಕರ ಬಿಲ್ಲೆಮನೆ ಅವರ 'ಹೋಮ್ ಕ್ವಾರಂಟೈನ್' ಕಥೆ ಇಷ್ಟಆಯ್ತು. ಇಂದಿನ ಕಾಲಕ್ಕೆ ಹೆಚ್ಚು ಪ್ರಸ್ತುತವೂ ಹೌದು. ವಿದೇಶದಲ್ಲಿ ಕುಳಿತು, ಸ್ವದೇಶದಲ್ಲಿರುವ ಹೆತ್ತವರಿಗೆ ತೋರಿಸುವ ಆನ್‌ಲೈನ್ ಕಾಳಜಿ ಅದೆಷ್ಟು ನಿರುಪಯೋಗ ಎಂಬುದರ ಬಗ್ಗೆ ತುಂಬಾ ಮಾರ್ಮಿಕವಾಗಿ ತಿಳಿಸಿದ್ದಾರೆ.

—ಭಾರತಿ ಸುಧೀಂದ್ರ, ಬೆಂಗಳೂರು

## ಸಚಿನ್ ದಾಂಪತ್ಯದ ಬೆಳ್ಳಿಹಬ್ಬ

ಸೆಲೆಬ್ರಿಟಿ ಪುಸ್ತಕದಲ್ಲಿ ಬಿಂದು ಬರೆದ 'ಸಚಿನ್ ದಾಂಪತ್ಯಕ್ಕೆ ಬೆಳ್ಳಿಹಬ್ಬ' ಲೇಖನ ಓದಿ ತುಂಬಾ ಖುಷಿ ಆಯ್ತು. ಧ್ರುವತಾರೆಯಂತೆ ಮಿನುಗುವ ಸಚಿನ್ ಅವರ ಆದರ್ಶ ಉತ್ಸಾಹ ಇಂದಿನ ಯುವ ಪ್ರೇಮಿಗಳ ದಾಂಪತ್ಯಕ್ಕೆ ಸ್ಫೂರ್ತಿ ನೀಡಬಹುದೇನೋ. ಸಣ್ಣ ಸಣ್ಣ ಕಾರಣಗಳಿಗೆ ಛಿದ್ರಗೊಳ್ಳುವ ಇಂದಿನ ಯುವಕುಟುಂಬಗಳಿಗೆ ಕ್ರಿಕೆಟ್ ದೇವರ ಪ್ರೀತಿ ರೋಲ್ ಮಾಡೆಲ್ ಆಗಲಿ.

—ಮಹಾಂತೇಶ್ ಎಸ್.

## ತಬಲಾ ರಾಜಕುಮಾರಿ

ರಿಂಪಾ ಶಿವ ಕುರಿತ ಲೇಖನ ಮತ್ತು ಮೇ 28ರ ಸಂಚಿಕೆಯ ಕೌಶಿಕಿ ಚಕ್ರವರ್ತಿಯವರ ಸಂದರ್ಶನ ತುಂಬಾ ಚೆನ್ನಾಗಿವೆ. ಇಬ್ಬರೂ ಯುವ ಸಾಧಕಿಯರೇ, ಕಿರಿ ವಯಸ್ಸಿನಲ್ಲಿಯೇ ಅತ್ಯುನ್ನತ ಸ್ಥಾನಕ್ಕೇರಿದ್ದಾರೆ. 'ಸುಧಾ'ದಲ್ಲಿ 'ವಿಚಾರ ಲಹರಿ' ಕೂಡಾ ತುಂಬಾ ಚೆನ್ನಾಗಿ ಬರುತ್ತಿದೆ. ಇದರಲ್ಲಿ ಆಧ್ಯಾತ್ಮಿಕ, ಐತಿಹಾಸಿಕ ಎಲ್ಲಾ ವಿಚಾರಗಳು ಇರುತ್ತವೆ.

—ಸುಜಾತಾ ಬಸವರಾಜ್, ಬೆಂಗಳೂರು

## ಚಡಗ ಪ್ರಶಸ್ತಿಗೆ ಆಹ್ವಾನ

ಕೋಟೇಶ್ವರದ ಎನ್.ಆರ್.ಎ.ಎಂ.ಎಚ್ ಪ್ರಕಾಶನ ಮತ್ತು ಸ್ಥಿತಿಗತಿ ತ್ರೈಮಾಸಿಕ ಪತ್ರಿಕೆಗಳ ಆಶ್ರಯದಲ್ಲಿ ಕೊಡುವ 'ಚಡಗ' ವಾರ್ಷಿಕ ಕಾದಂಬರಿ ಪ್ರಶಸ್ತಿಗೆ 2019ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತರು ತಮ್ಮ ಮೂರು ಕೃತಿಯ ಮೂರು ಪ್ರತಿಗಳನ್ನು ಆಗಸ್ಟ್ 15ರ ಒಳಗೆ ತಲುಪುವಂತೆ ಕಳಿಸಿಕೊಡಬೇಕು. ಈ ಪ್ರಶಸ್ತಿ ಹತ್ತು ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆ ಒಳಗೊಂಡಿದೆ.

ವಿಳಾಸ: ಉಪೇಂದ್ರ ಸೋಮಯಾಜಿ, 'ಶ್ರೀ' ಚಿತ್ರಪಾಡಿ, ಸಾಲಿಗ್ರಾಮ ಅಂಚೆ, ಉಡುಪಿ ಜಿಲ್ಲೆ, –575225 ಸಂಪರ್ಕ: 9740842722




## ಅಂತರ್ಜಾಲದಲ್ಲಿ ವಿಷಜೇಡಗಳು

ಚೈತ್ರಿಕಾ ನಾಯ್ಕ ಬರೆದ 'ಸೈಬರ್ ವಾರ್' ಲೇಖನ ಚೆನ್ನಾಗಿತ್ತು. ತಂತ್ರಜ್ಞಾನದ ಪರದೆಯ ಹಿಂದಿನ ಮತ್ತೊಂದು ಮುಖವನ್ನು ಪರಿಚಯಿಸಿತು. ನಾವು ತಂತ್ರಜ್ಞಾನದಲ್ಲಿ ಎಷ್ಟು ಮುಂದುವರೆದಿದ್ದೇವೆಯೋ ಅಷ್ಟೇ ಅಪಾಯದಲ್ಲೂ ಇದ್ದೇವೆ ಅನ್ನುವುದು ಮನವರಿಕೆಯಾಯಿತು. ಮನುಷ್ಯ ತಾನೇ ಸೃಷ್ಟಿಸಿದ ಜಾಲತಾಣದಲ್ಲಿ ಸಿಕ್ಕುಬಿದ್ದಂತೆ. ಹಿಲರಿ ಕ್ಲಿಂಟನ್ ಚುನಾವಣೆಯಲ್ಲಿ ಸೋತದ್ದು, ಸ್ವಿಸ್ ಬ್ಯಾಂಕಿನಲ್ಲಿರುವ ಕಪ್ಪು ಹಣ, ಕೊರೊನಾ ವೈರಸ್ ಇವುಗಳ ಹಿಂದೆ ಹ್ಯಾಕಿಂಗ್ ಇದೆ ಅಂದರೆ ಸೈಬರ್ ಅಪರಾಧದ ವ್ಯಾಪ್ತಿ ಎಷ್ಟು ದೊಡ್ಡದಿದೆ ಅನ್ನುವುದು ಅರಿವಿಗೆ ಬರುವುದು. ಒಳ್ಳೆಯದು ಇರುವಲ್ಲಿ ಸೈಡ್ ಎಫೆಕ್ಟ್ ಆಗಿ ಕೆಟ್ಟದ್ದೂ ಇರುತ್ತದೆ ಅನ್ನುವುದು ಶತಸಿದ್ಧ.

—ವಿನುತಾ ಹಂಚಿನಮನಿ, ಧಾರವಾಡ

'ಅಂತರ್ಜಾಲದಲ್ಲಿ ವಿಷಜೇಡಗಳು' ಲೇಖನ ಅತ್ಯಂತ ಆಳವಾಗಿ ಮತ್ತು ಸಂಕ್ಷಿಪ್ತವಾಗಿತ್ತು. ಜನರಿಗೆ ತಿಳಿಯುವ ಸರಳಭಾಷೆಯಲ್ಲಿದ್ದುದು ಸ್ವಾಗತಾರ್ಹ.

—ಮಹಾದೇವ ಕಳಸ

## ಹೀರೊಯಿನ್‌ಗಳ ದ್ವಂದ್ವ

ಬಾಲಿವುಡ್ ಪುಟದಲ್ಲಿ ಹನಿ ಅವರು ಬರೆದ ಬಾಲಿವುಡ್ ಹೀರೊಯಿನ್‌ಗಳ ದ್ವಂದ್ವದ ಕುರಿತಾದ ಬರಹ ಓದಿ ಬೇಸರವಾಯಿತು. ನಮಗಾಗಿ ದುಡಿಯುವ ಜನರ ಕಷ್ಟಕ್ಕೆ ಸ್ಪಂದಿಸದೇ ಅಮೆರಿಕದಲ್ಲಿ ನಡೆದ ಕೊಲೆಗಾಗಿ ಧ್ವನಿ ಎತ್ತುವುದು ಎಂತಹ ವಿಪರ್ಯಾಸ?

—ಶೈಲಜಾ ಜೋಶಿ, ಗದಗ

—ರಾಘವೇಂದ್ರ ರಾವ್, ಕಾರ್ಕಳ

## ರುಚಿ ರುಚಿ ಮಾವಿನ ಕುಲ್ಫಿ

ಆಹಾರ ವಿಭಾಗದಲ್ಲಿ ಮಾವಿನ ಹಣ್ಣಿನ ಸ್ಪೆಷಲ್ ಅಡುಗೆಗಳಲ್ಲಿ ಮಾವಿನ ಹಣ್ಣಿನ ಕುಲ್ಫಿ ಮಾಡುವ ವಿಧಾನ ಇತ್ತು. ನಾವೂ ಪ್ರಯತ್ನಿಸೋಣ ಅಂತ ಮಾಡೇಬಿಟ್ಟೆವು. ರುಚಿಯಾದ ಮಾವಿನ ಕುಲ್ಫಿ ಕಲಿಸಿದ ಅಶ್ವಿನಿ. ಎ. ಹೆಗಡೆ ಅವರಿಗೆ ಧನ್ಯವಾದಗಳು. ಎಳೆಯರ ಅಂಗಳದಲ್ಲಿ ಬಂದ 'ಪಟ್ಟಪ್ಪನೂ, ಮಿಟ್ಟಲಿಯೂ, ಮೋಜೋ, ಮೋನೋ' ಎಂಬ ಕಥೆಯನ್ನು ದಿನವೂ ಹೊಸ ಕಥೆಯನ್ನು ಹೇಳು ಎಂದು ಕೇಳುವ ನನ್ನ ಮೊಮ್ಮಗನಿಗೆ ಹೇಳಿದೆ. ಅವನಿಗೆ ಆ ಕಥೆ ಇಷ್ಟವಾಯಿತು.

—ಕೆ. ಎಸ್. ಸವಿತ, ಮುತ್ಯಾಲನಗರ

## ಹಕ್ಕಿಗಳ ಸ್ವಿಮ್ಮಿಂಗ್ ಪೂಲ್

ಪ್ರಸಾದ್ ಶೆಣೈ ಆರ್. ಕೆ. ಅವರ 'ಹಕ್ಕಿಗಳಿಗೊಂದು ಸ್ವಿಮ್ಮಿಂಗ್ ಪೂಲ್' ಲೇಖನ ಮುದನೀಡಿತು. ನನ್ನ ಮನೆಯ ಚಿಕ್ಕ ಹೂದೋಟದಲ್ಲಿಯೂ ಪಕ್ಷಿಗಳು ಹೂವಿನ ಮಧು ಹೀರುವುದನ್ನು ಕಂಡಾಗ ಸಂತಸವಾಗುತ್ತದೆ. ಅವುಗಳಿಗಾಗಿ ನೀರು ಮರಿಗೆ ವ್ಯವಸ್ಥೆ ಮಾಡಲು ಹೊರಟಾಗಲೇ ಮಳೆ ಆರಂಭವಾಯಿತು. ಮುಂದಿನ ವರ್ಷ ನನ್ನದೂ ಒಂದು ಮರಿಗೆ ನಮ್ಮ ಹೂದೋಟದಲ್ಲಿ ಕಾಣುವುದಿದೆ.

—ಪಿ. ವಾಸುದೇವ ಭಟ್, ಉಡುಪಿ

## ಪ್ರೀತಿಯ 'ಸುಧಾ'

ಚಂದ ಮುಖಪುಟ ನೋಡೋಕೆ
ಚಂದ ಆಹಾರ ತಿನ್ನೋಕೆ
ಚಂದ ಸುದ್ದಿ ಓದೋಕೆ

ದುಂದು ವೆಚ್ಚ ಏತಕೆ?
ಬೇರೆ ವಾರಪತ್ರಿಕೆ ಯಾಕೆ?
ವಿಷಯ ತಿಳಿಸಿದ್ದು ಸಾಕೆ?
ಇನ್ನೂ ತರಿಸಿಲ್ಲ ಏಕೆ?
ಬಿಟ್ಟರೆ ಸಿಗಲ್ಲ ಜೋಕೆ!

—ಬಿ.ಆರ್. ಉಷಾ, ಬೆಂಗಳೂರು

## ಉಳಿತಾಯದಲ್ಲಿ ಶಿಸ್ತು

ಡಿ.ಎಂ. ಘನಶ್ಯಾಮ್ ಬರೆದ 'ಉಳಿತಾಯದಲ್ಲಿ ಶಿಸ್ತು ಎಂದರೇನು?' ಲೇಖನದಲ್ಲಿ ಉಳಿತಾಯ ಮತ್ತು ಶಿಸ್ತನ್ನು ಹೇಗೆ ಪಾಲನೆ ಸರಿಯಾಗಿ ವಿವರಿಸಿದ್ದಾರೆ. ನಾವು ದುಡಿಯುವ ಹಣದಲ್ಲಿ ಒಂದು ಭಾಗ ಉಳಿತಾಯ ಮಾಡಿದರೆ ಮುಂದೆ ನಮಗೆ ಕಷ್ಟ ಕಾಲದಲ್ಲಿ ಉಪಯೋಗಕ್ಕೆ ಬರುತ್ತದೆ. ಹಣ ಸ್ವಲ್ಪ ಸ್ವಲ್ಪ ಕೂಡಿಟ್ಟರೆ ದುಪ್ಪಟ್ಟಾಗುತ್ತದೆ. ಮನೆ, ನಿವೇಶನ, ವಾಹನ ಕೊಳ್ಳುವಾಗ ಸಾಲದ ಜೊತೆಗೆ ನಾವು ಉಳಿಸಿದ ಹಣ ಸೇರಿದಾಗ ಸಾಲದ ಹೊರೆ ಕಡಿಮೆಯಾಗುತ್ತದೆ.

—ಎಚ್.ಎಸ್. ರಾಘವೇಂದ್ರ, ಬೆಂಗಳೂರು

## ಮರೆಯಲಿ ಹ್ಯಾಂಗ

ಎಸ್.ಪಿ. ವಿಜಯಲಕ್ಷ್ಮೀ ಅವರು ಬರೆದಿರುವ ಮಾವೋತ್ಸೆ ತುಂಗನ ಕುರಿತಾದ ಬರಹ ಚೆನ್ನಾಗಿತ್ತು. ಸಂಕ್ಷಿಪ್ತವಾಗಿಯೂ ಮಾಹಿತಿಪೂರ್ಣವಾಗಿಯೂ ಇತ್ತು.

—ಎಂ. ಬಾಲಕೃಷ್ಣ ಆಚಾರ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in